28. ತೀರ್ಥಹಳ್ಳಿ ತಾಲ್ಲೂಕು ಬೋರ್ಡ್ ವೈಸ್ ಪ್ರೆಸಿಡೆಂಟರಾಗಿ ಅಲ್ಲಿನ ಸಬ್ ರಿಜಿಸ್ಟ್ರಾರ್ ಮಿ|| ನಾರಾಯಣರಾಯರನ್ನು ಚುನಾಯಿಸಿದ ವಿಷಯದಲ್ಲಿ: ತಲ್ಪಿದ ತೀರ್ಥಹಳ್ಳಿ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರವರ ನಂಬರು 2237—30-4-09ನೆ ಯಾದಿ ಓದಲಾಗಿ ಸದರಿ ನಾರಾಯಣರಾಯರು ಈಚಿಗೆ ವರ್ಗಪಟ್ಟರುವದ್ದರಿಂದ ಬೇರೆ ಚುನಾವಣೆ ಮಾಡಬೇಕೆಂತ ತೀರ್ಮಾನಿಸಲಾಯಿತು.

29. ಹುಮಚದಕಟ್ಟೆ, ವೇಗರವಳ್ಳಿ, ಆಗುಂಬೆ ಮತ್ತು ಮಂಡಗದ್ದೆ ಗ್ರಾಮಗಳಿಗೆ ಬಬೂ ಬ್ಬ ರುಪಾಡಮಾಲಿಯನ್ನು ಮಾಹೆ ಯಾನಾ 6 ರೂಪಾಯಿ ತಲಬಿನೇಲೆ ನೇಮಿಸಬೇಕೆಂತ ತಲ್ಪಿದ ಸದರಿ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರವರ ನಂಬರು 1709—23-2-09ನೆ ಯಾದಿ ಓದಲಾಗಿ 1910—11ನೆ ಸಾಲಿನ ಬಡ್ಜಟ್ ತಯಾರಿಸುವಾಗ್ಗೆ ಯೋಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

30. ಹೊಸದಾಗಿ ತಯಾರಾಗಿರುವ ತವನಂದಿ, ಆನೆವಟ್ಟಿ ರಸ್ತೆಯ ಕೊನೆ $7\frac{1}{4}$ ಮೈಲಿಗಳ ಸಾಲಾಬಾದ ಕಾಮಗಾರಿಗೋಸ್ಕರ ರೂಪಾಯಿ 362—8—0 ಕೊಡಬೇಕೆಂತ ತಲ್ಪಿದ ಶಿವಮೊಗ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ನಂಬರು 746-20-7-09ನೆ ಡಾಕೆಟ್ ಓದಲಾಗಿ ರಿ-ಅಪ್ರೋಪ್ರಿಯೇಷನಿಂದ ಸದರಿ ಹಣ ಬದಗಿಸುವದಕ್ಕಾಗುವದಿಲ್ಲವಾದ್ದರಿಂದ ಸದರಿ ರಸ್ತೆಯ ಕಾಮಗಾರಿಗೋಸ್ಕರ ಇರುವ ಮೊಬಲಗಿನಲ್ಲಿಯೇ ಈ ಭಾಗ ರಿಪೇರಿ ಮಾಡಬೇಕೆಂತ ತೀರ್ಮಾನಿಸಲಾಯಿತು.

31. ಶಿವಮೊಗ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ನಂಬರು 749—24-7-09ನೆ ಡಾಕೆಟ್ ನೊಡನೆ ತಲ್ಪಿದ ಡಿ. ಪಿ. ಡಬ್ಲ್ಯೂ. ಮೂಲಕ 09ನೆ ಜೂನ್ ತಿಂಗಳಿನಲ್ಲಿ ಮಾಡಿದ ಖರ್ಚು ಸ್ಟೇಟ್‌ಮೆಂಟ್ ಓದಲಾಗಿ ರಿಕಾರ್ಡ್ ಮಾಡಲಾಯಿತು.

32. ಪ್ರತಿ ವರುಷ ಪ್ರಾರಂಭದಲ್ಲಿ Schedule of rates ನ್ನು ರಿವೈಜ್ ಮಾಡಿ ಅದರ ಪ್ರತಿಯನ್ನು ಗವರ್ನಮೆಂಟಿಗೆ ಡಿಸ್ಟ್ರಿಕ್ಟ್ ಬೋರ್ಡಿನವರು ಕಳುಹಿಸಬೇಕೆಂತ ತಲ್ಪಿದ ನಂಬರು 73907-405—ಲೋ. ಬೋ. 432-06 ಮಕ್ರುಂ 6-2-09ನೆ ಗವರ್ನಮೆಂಟ್ ಪೊಸಿಡಿಂಗ್ಸ್ ಓದಲಾಗಿ, ಈ ವಿಷಯವು ಮುಂದಿನ ಮಿಟಿಂಗಿನಲ್ಲಿ ಚರ್ಚಿಸತಕ್ಕದ್ದೆಂತಲೂ, ಎಗ್ಜಿಕ್ಯೂಟಿವ್ ಇಂಜನಿಯರವರ ಅಭಿಪ್ರಾಯವನ್ನು ತರಿಸಿಕೊಳ್ಳಬೇಕೆಂತಲೂ ತೀರ್ಮಾನಿಸಲಾಯಿತು.

33 ಬೋರ್ಡಿನವರ ಒಪ್ಪಿಗೆಯ ನಿರೀಕ್ಷಣೆಮೇಲೆ ಪ್ರೆಸಿಡೆಂಟರವರಿಂದ ಸ್ಯಾಂಕ್ಷನ್ ಮಾಡಲ್ಪಟ್ಟು ಈ ಕೆಳಗೆ ನಮೂದಿಸಿರುವ ಅಂದಾಜುಗಳು ಓದಲ್ಪಟ್ಟು ಅನುಮೋದಿಸಲ್ಪಟ್ಟವು.

ನಂಬ	ತಾಲ್ಲೂಕು	ಕಾಮಗಾರಿ.	ಮೊಬಲಗು.
			ರೂ.
1	ಹೊನ್ನಾಳಿ ...	ಚಿನ್ನವುಂಬಾಪುರ ಭಾವಿಯ ರಿವೈಜ್ಡ್ ಅಂದಾಜ	400
2	ಕುಂಸಿ ಸಬ್ ತಾಲ್ಲೂಕು ...	ಅರೇರಕೊಪ್ಪದ ಭಾವಿ ...	475
3	ಶಿವಮೊಗ	ನರಸಪ್ಪನಾಯಿಕನ ಕೇರಿ ರಸ್ತೆ ಕಾಮಗಾರಿ (ಹೊಳೇಹೊನ್ನೂರು).	19
4	ಡಿಟೋ ...	ಕೊಟ್ಟೂಗರ ಕೇರಿಯಿಂದ ಅಗಸರ ಕೇರಿಗೆ ಹೋಗುವ ರಸ್ತೆ ಕಾಮಗಾರಿ (ಹೊಳೆಹೊನ್ನೂರು).	73
5	ಡಿಟೋ ...	ಬಿಂಕಿಪುರ ಯೂನಿಯನ್ನಿನಲ್ಲಿ ದೊಡ್ಡಕುರುಬರ ಕೇರಿಯ ರಸ್ತೆ ಚರಂಡಿ ಕಾಮಗಾರಿ.	179
6	ಡಿಟೋ ...	ಬಿಂಕಿಪುರ ಯೂನಿಯನ್ನಲ್ಲಿ ಅಗಸರ ಕೇರಿಯಿಂದ ದೊಡ್ಡಕುರುಬರ ಕೇರಿಗೆ ಹೋಗುವ ರಸ್ತೆ ಮತ್ತು ಚಿರಂಡಿ ಕಾಮಗಾರಿ.	21
7	ಡಿಟೋ ...	ಹೊಳೆಹೊನ್ನೂರು ಯೂನಿಯನ್ನಿನಲ್ಲಿ ಭೊಂಡುರಾಯರ ಮನೆ ಎದುರಿನ ರಸ್ತೆ ರಿಪೇರಿ.	7

34. ಈ ಕೆಳಗೆ ನಮೂದಿಸಿರುವ ಅಂದಾಜಾಗಳು ಬೋರ್ಡಿನವರ ಒಪ್ಪಿಗೆಯ ನಿರೀಕ್ಷಣೆಮೇಲೆ ಪ್ರೆಸಿಡೆಂಟರವರಿಂದ ಕಾಂಟರ್ ಸೈನ್ ಮಾಡಲ್ಪಟ್ಟು ಎಗ್ಜಿಕ್ಯೂಟಿವ್ ಇಂಜನಿಯರವರಿಗೆ ವಾಪಸ್ ಮಾಡಲ್ಪಟ್ಟವು.

1. ಸಕ್ರೆಬೈಲ್ 3ನೆ ಕ್ಲಾಸ್ ಮುಸಾಫರ್ ಎಂಗ್ಲೆಯ ರಿಪೇರಿಯ ಅಂದಾಜು ರೂಪಾಯಿ ... 106

35. ಮುಂದಿನ ಮಿಟಿಂಗ್ ಸೆಪ್ಟಂಬರ್ ತಾರೀಖು 30 ರಲ್ಲಿ ನಡಿಯತಕ್ಕದ್ದೆಂತ ತೀರ್ಮಾನಿಸಲಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ಯ 1909—10ನೆ ಇಸವಿ ಮಿ|| ನಂಬರ್ 170.

ಅರ್ಜೀದಾರ ದೇವನಹಳ್ಳಿಲಿರುವ ಶೆಟ್ಟಿ ಚನ್ನಪ್ಪನವರ ಮಗ ನಂಜುಂಡಪ್ಪ, ಬೆಂಗಳೂರು ಸ್ಥಳದ ಮೈನರಾದ ಅಡಿವಿಯಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರ್ ಅಡಿವಿಯಪ್ಪನಿಗೆ ಮುಖ್ಯ ವಾರಸುದಾರ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಸದರೀ ಮೈನರಿನ ಆಸ್ತೀ ಕಾಪಾಡುವುದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1909ನೆ ಇಸವಿ ಅಕ್ಟೋಬರ್ 8ನೆ ತಾರೀಖಿನಲ್ಲಿ ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ಯ 1909ನೆ ಇಸವಿ ಸಪ್ಟಂಬರ್ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟಿನ ವೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

1909—10ನೆ ಇಸವಿ ಮಿ|| ನಂಬರ್ 171.

ಬೆಂಗಳೂರಲ್ಲಿದ್ದು ವ್ಯತಪಟ್ಟು ಶಿದ್ದಂಣನವರ ಮುನಿಯಪ್ಪನ ಮಗ ನಂಜುಂಡಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ದೇವನಹಳ್ಳಿಲಿರುವ ಅಡಿವಿಯಪ್ಪ ಮೈನರ್, ಗಾರ್ಡಿಯ್ಯ ನಂಜುಂಡಪ್ಪ ಮೃತಪಟ್ಟು ಸದರೀ ನಂಜುಂಡಪ್ಪನ ವರಿಗೆ ಮುಖ್ಯವಾರಸ್ ಆಗಬೇಕೆಂಬ ಹಕ್ಕು ದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ವ್ಯತಪಟ್ಟು ನಂಜುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 2,37[illegible]—10—9 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ನಂಜುಂಡಪ್ಪನವರ ಅರ್ಜಿಯನ್ನು ಸ|| 1909ನೆ ಇಸವಿ ಅಕ್ಟೋಬರ್ ತಿಂಗಳು 8ನೆ ತಾರೀ ಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟು ನಂಜುಂಡಪ್ಪ ನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1909ನೆ ಇಸವಿ ಸೆಪ್ಟಂಬರ್ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊ ಡೋಣಾಗಿದೆ.

ಸ|| 1909—10ನೆ ಇಸವಿ ಮಿ|| ನಂಬರ್ 173

ಮುದರಾಸು ಮತ್ತು ಸದರ್ನ ಮರಾಟಾ ರೈಲ್ವೆಯಲ್ಲಿ ಗೂಡ್ಸು ರೈತರಾಗಿದ್ದು ವ್ಯತಪಟ್ಟು ಕ್ರಿಷ್ಣಶಿಂಗ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕಾಡಗೋಡಿಲಿರುವ ಬಾಗೂಬಾಯಮ್ಮಾಳ್ ವ್ಯತಪಟ್ಟು ಸದರೀ ಕ್ರಿಷ್ಣಶಿಂಗರಿಗೆ ಖಾಸಾ ಹೆಂಡತಿ ಆಗಬೇ ಕೆಂಬ ಹಕ್ಕು ದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ವ್ಯತಪಟ್ಟು ಕ್ರಿಷ್ಣಶಿಂಗರ ಜಿಂದಗಿ ಬಗ್ಯಾಗಿ ಬರತಕ್ಕ 250 ರೂ ಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋ ರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಾಗುಬಾಯಮ್ಮಾಳ್ ಅರ್ಜಿಯನ್ನು 1909ನೆ ಇಸವಿ ಅಕ್ಟೋಬರ್ ತಿಂಗಳು 8ನೆ ತಾರೀ ಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟು ಕ್ರಿಷ್ಣ ಶಿಂಗರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1909ನೆ ಇಸವಿ ಸೆಪ್ಟಂಬರ್ 20ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ|| 1909—10ನೆ ಇಸವಿ ಮಿ|| ಅರ್ಜೀ ನಂಬರ್ 194.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಶ್ಯಾನುಭೋಗ್ ಕೆಲಸ ಮಾಡುತ್ತಾ ಇದ್ದು ವ್ಯತಪಟ್ಟು ಹೊನ್ನಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಅವ್ವಂಣಮ್ಮ, ವ್ಯತಪಟ್ಟು ಸದರಿ ಹೊನ್ನಪ್ಪನವರಿಗೆ ಖಾಸಾ ಮಗಳು ಆಗಬೇಕೆಂಬ ಹಕ್ಕುದಾರಿ ಮೇ ಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ವ್ಯತಪಟ್ಟು ಹೊನ್ನಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ (300) ರೂಪಾಯಿ ಸಾಲವ ನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾ ಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಅವ್ವಂಣಮ್ಮನ ಅರ್ಜಿಯನ್ನು 1909ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 8 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟು ಹೊನ್ನಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1909ನೆ ಇಸವಿ ಸೆಪ್ಟಂಬರ್ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊ ಡೋಣಾಗಿದೆ.

ಸ|| 1909—10ನೆ ಇಸವಿ ಮಿ|| ನಂಬರ್ 211.

ಗುಬ್ಬಿಯಲ್ಲಿದ್ದು ವ್ಯತಪಟ್ಟು ಡಿ. ಗುಂಡುರಾಯರ ಆಸ್ತೀ ವಿಷಯದಲ್ಲಿ —

ಅರ್ಜೀದಾರ್ರು 1ನೆ ವಾಸುದೇವರಾವ್, 2ನೆ ರಾವ್ಬರಾವ್, ಮೈನರ್, ಗಾರ್ಡಿಯ್ಯ ಲಕ್ಷ್ಮಕ್ಕಂಬಾಯಿ, ವ್ಯತಪಟ್ಟು ಸದರಿ ಡಿ. ಗುಂ ಡುರಾಯರಿಗೆ ಖಾಸಾ ಹೆಂಡತಿ ಮತ್ತು ಮಕ್ಕಳು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ವ್ಯತಪ ಟ್ಟು ಡಿ. ಗುಂಡುರಾಯರ ಜಿಂದಗಿ ಬಗ್ಯಾಗಿ ಬರತಕ್ಕ (7,324—1—6) ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇ ಸವಿ 7ನೆ ರೆಗ್ಯುಲೇಷ್ನ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ವಾಸುದೇವರಾವ್, 2ನೆ ರಾವ್ಬರಾವ್, 3ನೆ ಕ್ರಿಷ್ಣರಾವ್, 2—ನೆ ಯುವರು ಮೈ ನರ್, ಗಾರ್ಡಿಯ್ಯ ತಾಯಿ ಲಕ್ಷ್ಮಕ್ಕಂಬಾಯಿಯವರ ಅರ್ಜಿಯನ್ನು ಸ|| 1909ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟು ಡಿ. ಗುಂಡುರಾ ಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1909ನೆ ಇಸವಿ ಸೆಪ್ಟಂಬರ್ ತಿಂಗಳು 20 ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋ ಣಾಗಿದೆ.

ಟಿ. ಇ. ಜಯರಾಮ್ಮಯ್ಯರ್,
ಸಬ್ ಜಡ್ಜ್.